DdC-341
T.P-2

51st Year of Publication ★ SATYAVADI Daily, MYSORE 4

Reg No B G 155 ಶ್ರೀ 25-7-1968

ಸಮಯ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ತರಗುಪಿ ವರದರಾವ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಲಂಡನ್ನಿನಲ್ಲಿ ಅಯೂಬರ ವಿರುದ್ಧ ಪ್ರದರ್ಶನ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸಪಯ್ಯನವರು, ಅಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಯವರು ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಮೊಹಲ್ಲಾ ದಿನ

ಮೈಸೂರು— ಸಿಟಿ ಮುನಸಿಪಾಲಿಟಿಯವರು ತಾ|| 26 ಶುಕ್ರವಾರದಂದು ಚಾಮರಾಜ ಮೊಹಲ್ಲಾ ಜೊಣಚಿಕೊಪ್ಪಲಿನಲ್ಲಿ ಮೊಹಲ್ಲಾ ದಿನ ಏರ್ಪಡಿಸಿರುವರು.

★

ಪುರಸಭೆ

ಮೈಸೂರು— ಪುರಸಭೆಯ ಈ ತಿಂಗಳಿನ ಸಾಧಾರಣ ಅಧಿವೇಶನವು ತಾ || 31 ಬುಧವಾರ ಮಧ್ಯಾಹ್ನ 1 ಗಂಟೆಗೆ ಜರುಗಲಿದೆ.

ಮಿಡತೆ ಕಾಟ

ನವಲಿಹಳ್ಳಿ— ಮಿಡತೆಗಳ ಚಿಕ್ಕ ತಂಡಗಳು ಜುಲೈ ಎರಡನೇ ವಾರಾಂತ್ಯದ ಹೊತ್ತಿಗೆ ಪಾಕಿಸ್ಥಾನದಿಂದ ಭಾರತವನ್ನು ಪ್ರವೇಶಿಸಿವೆ.

★

ಕಾಂಗ್ರೆಸ್ ಅಧ್ಯಕ್ಷರು

ಟೋಕಿಯೋ— ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಹಾಂಕಾಂಗಿನಿಂದ ಇಲ್ಲಿಗೆ ಒಂದು ವಾರ ಸೌಹಾರ್ದ ಭೇಟಿಗಾಗಿ ಆಗಮಿಸಿದರು.

★

ದೇವಾಲಯ ಪ್ರವೇಶ

ಕೊಲಂಬೊ— ಜಾಫ್ನಾದ ವಲ್ಲಾವಿಡಾ ಪುರನಲ್ಲಿಯ ಮುರುಗಂ ದೇವಾಲಯಕ್ಕೆ ಹರಿಜನರು ಪ್ರವೇಶಿಸಲು 23 ದಿನಗಳಿಂದ ನಡೆಯುತ್ತಿದ್ದ ಸತ್ಯಾಗ್ರಹ ನಿಂತಿತು — ತಾ || 26 ರಂದು ದೇವಾಲಯಗಳ ಉಳ್ಳವದ ನಂತರ ಪ್ರವೇಶದ ಬಗ್ಗೆ ಮಾತುಕತೆ ನಡೆಸಲು ನಿರ್ಧರಿಸಲಾಯಿತು.

★

'ವಿಜಯಲಕ್ಷ್ಮಿ'

ಬೆಂಗಳೂರು— ವಿಧಾನಸಭೆ ವಿದು ಒಂದು ಸರಳ ಮತ್ತು ಪರಿಣಾಮಕಾರಿ ಸಮಾರಂಭದಲ್ಲಿ 12 ವರ್ಷದ 'ವಿಜಯಲಕ್ಷ್ಮಿ" ಆನೆಯು ತಿರುಪತಿ ದೇವಸ್ಥಾನಕ್ಕೆ ಅರ್ಪಿಸಲಾಯಿತು.

CHANGE OF NAME

I, M. A. Raje Gowda s/o Sri Anne Gowda, studying in II B. A. Maharaja's College, Mysore, have changed my name as M. A. Rajashekhar.

ಷೇಕ್ ಅಬ್ದುಲ್ಲರ ಬಹಳ ರಹಸ್ಯ ಹಣ

ನವದೆಹಲಿ— ಷೇಕ್ ಅಬ್ದುಲ್ಲರ ಮೇಲೆ, ಅವರ ರಾಷ್ಟ್ರೀಯ ವಿರುದ್ಧ ಚಟುವಟಿಕೆ ಮತ್ತು ಅತಿ ಆಕ್ಷೇಪಾರ್ಹ ಹೇಳಿಕೆಗಳ ಸೂಕ್ತ ಕಾಲದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವದೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು — ಕೆಲವು ರಹಸ್ಯ ಮೂಲಗಳಿಂದ ಅವರಿಗೆ ಅಪಾರ ಹಣ ಬರುತ್ತಿರುವ ವಿಷಯದಲ್ಲಿ ಸರ್ಕಾರದ ತೀವ್ರ ಗಮನವಿದೆ ಎಂದೂ ತಿಳಿಸಲಾಯಿತು.

★

ರಫ್ತು, ಚೀಣಾ ಪದಾರ್ಥಗಳು

ನವದೆಹಲಿ— ಭಾರತದ ಮಾರುಕಟ್ಟೆಗಳಲ್ಲಿ ಮಾರಾಟವಾಗುವ ಚೀಣಾ ಮತ್ತು ರಫ್ತು ಪದಾರ್ಥಗಳನ್ನು ಜಪ್ತಿಮಾಡಿ ವಶಪಡಿಸಿಕೊಳ್ಳಲಾಗುವುದೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

●

ಪ್ರವಾಹ ಸಂತಸ್ತರಿಗೆ

ಬೆಂಗಳೂರು— ದಕ್ಷಿಣ ಕನ್ನಡದಲ್ಲಿ ನೆರೆಹಾವಳಿಯಿಂದ ಸಂಕಷ್ಟಕ್ಕೀಡಾದ ಕಡೆ ಕಂಟ್ರೋಲು ಬೆಲೆಯಲ್ಲಿ ಮಾರಲು ಸರಕಾರವು 1000 ಕ್ವಿಂಟಾಲು ಅಕ್ಕಿ ಮತ್ತು 3400 ಕ್ವಿಂಟಾಲು ಮಿಲೋ ನಿಗದಿ ಮಾಡಿದೆ : ಇದರ ಜೊತೆಗೆ ಜಿಲ್ಲಾ ಪರಿಹಾರ ನಿಧಿಯಿಂದ ಕೊಡಲಾದ ರೂ. 18000 ಬೆಲೆಯ ಅಕ್ಕಿ, ರವೆ, ಮಿಲ್ಟೋ ಉಚಿತವಾಗಿ ಹಂಚಲಾಗುವುದು.

★

ಅಯೂಬರ ವಿರುದ್ಧ ಪ್ರದರ್ಶನ

ಲಂಡನ್— ಪಾಕಿಸ್ಥಾನ ಅಧ್ಯಕ್ಷ ಅಯೂಬರು ಇಳಿದುಕೊಂಡಿರುವ ಹೋಟಲಿನೆದುರು ಅಯೂಬರ ವಿರುದ್ಧ ರಂದ 150 ಪಾಕಿಸ್ಥಾನ್ ವಿದ್ಯಾರ್ಥಿಗಳು ಸೋಮವಾರ ರಾತ್ರಿ ಉರಿಯುವ ಪಂಜನ್ನು ಹಿಡಿದುಕೊಂಡು ಪ್ರದರ್ಶನ ನಡೆಸಿದಾಗ ಪೋಲೀಸರಿಗೂ ಅವರಿಗೂ ಘರ್ಷಣೆಯಾಯಿತು — ಕೊಲೆ ಪಾತಕ, ಸರ್ವಾಧಿಕಾರಿ, ಮನೆಗೆ ಹೋಗು ಎಂದು ಘೋಷಣೆ ಕೂಗಿದರು — ಅಯೂಬರ ಭಾವಚಿತ್ರ, 'ಮಿತ್ರರು, ಯಜಮಾನರಲ್ಲ" ಎಂಬ ಅವರ ಆತ್ಮಕಥೆ, ಮತ್ತು ಅಯೂಬರ "ಪಾಕಿಸ್ತಾನ ರಾಜ್ಯಾಂಗ" ಪ್ರತಿಗಳನ್ನು ಸುಟ್ಟರು — ಅವರು ಇಲ್ಲಿರುವವರೆಗೆ ಪೀಡಿಸುವದಾಗಿಯೂ, ಕ್ರೀಡಾಪಟ್ಟಿನಲ್ಲಿ ಗಾಲ್ಫ್ ಆಟಗಳಿಗೆ ಹೋದಾಗ ಪ್ರತಿಭಟಿಸುವದಾಗಿಯೂ ತಿಳಿಸಲಾಗಿದೆ.

★

ಹಾಂಕಾಂಗ್— ಕ್ಯಾಂಟನ್‌ನಲ್ಲಿ 50 ಸಾವಿರ ಮಂದಿ ಎದುರು ನಡೆದ ವಿಚಾರಣೆಯಲ್ಲಿ 26 ಚೀಣಿಯರಿಗೆ ವಿವಿಧ ಕಾಲದ ಜೈಲು ವಾಸ ವಿಧಿಸಲಾಯಿತು.

ಘೇರಾವೊ

ಮಂಗಳೂರು— ಸರ್ಕಾರಿ ಕಾಲೇಜು ವಿದ್ಯಾರ್ಥಿಗಳು ಪ್ರಿನ್ಸಿಪಾಲರಿಗೆ ಘೇರಾವೊ ಹಾಡಿದರು.

★

ಭೂಕಂದಾಯ ವಜಾ

ಭೂಪಾಲ್— ಮಧ್ಯಪ್ರದೇಶ ಸರಕಾರವು ಭೂ ಕಂದಾಯ ವಜಾಮಾಡುವ, 10 ಎಕ್ರೆ ಮೇಲ್ಪಟ್ಟ ಕಪ್ಪೆ ಭೂ ಅಭಿವೃದ್ಧಿ ತೆರಿಗೆ ವಿಧಿಸುವ, ಕ್ಯಾಷ್ ಕ್ರಾಪ್ ಮೇಲೆ ಲೆವಿ ಹಾಕುವ, ಈ ರೀತಿ ಮೂರು ಅರ್ಡಿನೆನ್ಸ್ ಹೊರಡಿಸಿದೆ.

ಹಿಂದೂಗಳ ಆಚಾರ

ಸಂಗ್ರಾಹಕರು– 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

★

(ಮುಂದುವರಿದುದು)

ಹಿಂದೂಸಮಾಜವು ತನ್ನ ಮೇಲೆ ಆದ ಈ ರೀತಿಯ ಧಾರ್ಮಿಕ ಆಘಾತದಿಂದ ಚೇತರಿಸಿಕೊಳ್ಳುವುದರೊಳಗಾಗಿ, ಮುಸಲ್ಮಾನರಿಂದ ರಾಜಕೀಯ ಆಕ್ರಮಣಗಳು ಪ್ರಾರಂಭಗೊಂಡವು. ಧಾರ್ಮಿಕ ಯುದ್ಧದಲ್ಲಿ ನಿರತರಾಗಿದ್ದ ಬ್ರಾಹ್ಮಣ, ಕ್ಷತ್ರಿಯ ಜಾತಿಗಳು ದುರ್ಬಲವಾಗಿದ್ದುದರಿಂದಲೇ ಮುಸಲ್ಮಾನರ ಆಕ್ರಮಣಕ್ಕೆ ಪ್ರದೇಶವು ಒಳಗಾಗಬೇಕಾಯಿತು. ಆದರೆ ಕೆಲವು ಕಾಲದಲ್ಲಿಯೇ ಸಮಾಜವು ರಾಜಕೀಯ ಆಕ್ರಮಣವನ್ನು ತಡೆದುಹಾಕಲು ಸಮರ್ಥವಾಯಿತು. ಶ್ರೀ ವಿದ್ಯಾರಣ್ಯರು, ಶ್ರೀ ಸಮರ್ಥ ರಾಮದಾಸರು, ರಾಣಾ ಪ್ರತಾಪಸಿಂಹ, ಛತ್ರಪತಿ ಶಿವಾಜಿ, ನಾನಾ ಫಡ್ನವೀಸ್, ರಾಣಿ ಲಕ್ಷ್ಮಮ್ಮಣ್ಣಿ ಮುಂತಾದವರ ನೇತೃತ್ವದಲ್ಲಿ ಹಿಂದೂಗಳು ಮುಸ್ಲಿಂ ರಾಜ್ಯಗಳನ್ನು ನಾಶಗೊಳಿಸಿದರು.

ಆಷ್ಟರಲ್ಲಿ ಆ ವೇಳೆಯಲ್ಲಿ ವ್ಯಾಪಾರಕ್ಕಾಗಿ ಬಂದ ಆಂಗ್ಲರು ಈ ದೇಶದ ಪರಿಸ್ಥಿತಿಯನ್ನು ಕಂಡು, ತಮ್ಮ ಕುಟಿಲ ನೀತಿಯಿಂದ ರಾಜ್ಯಭಾರವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಈ ರೀತಿ ಒಂದು ರೀತಿಯ ಆಕ್ರಮಣವನ್ನು ಪ್ರತಿಭಟಿಸುತ್ತಿದ್ದಂತೆಯೇ ಮತ್ತೊಂದು ರೀತಿಯ ಆಕ್ರಮಣ ಎರಗಿಬಂತು. ಅತ್ಯಂತ ಕುಟಿಲರೂ, ಸಂಘಟಿತರೂ ಆದ ಇಂಗ್ಲೀಷಿನವರ ಎದುರಿಗೆ, ಅಸಂಘಟಿತರೂ, ವ್ಯಕ್ತಿಸ್ವಾರ್ಥಪರರೇ ಹೆಚ್ಚಾಗಿಯೂ ಇದ್ದ ಹಿಂದುಗಳು ಹೋರಾಡಬೇಕಾಯಿತು. ಈ ಹೋರಾಟ ಒಂದು ಶತಮಾನಕಾಲ ನಡೆಯಿತು. ಲೋಕಮಾನ್ಯ ತಿಲಕ್, ಸ್ವಾಮಿ ವಿವೇಕಾನಂದ ಮದನ ಮೋಹನ ಮಾಳವೀಯ, ನೇತಾಜಿ ಸುಭಾಷ್‌ಚಂದ್ರ ಬೋಸ್, ವೀರ ಸಾವರ್ಕರ್, ಮಹಾತ್ಮಾ ಗಾಂಧಿಮುಂತಾದ ಅನೇಕ ಮಹಾಪುರುಷರ ಮಾರ್ಗದರ್ಶನದಂತೆ ಹೋರಾಟ ನಡೆದು, ಕೊನೆಗೆ 1947 ರಲ್ಲಿ ಭಾರತದ ಕೆಲವು ಭಾಗ ಸ್ವತಂತ್ರಗೊಂಡಿತು. ಮತ್ತೆ ಕೆಲವು ಭಾಗ ಇಂಗ್ಲೀಷರಿಂದ ಬಿಡಲ್ಪಟ್ಟು ಮುಸ್ಲಿಂರ ವಶವಾಗಿ ಪಾಕಿಸ್ತಾನವಾಯಿತು.

Respectfully dedicated

To The Director
Publicity, of Information
& Tourism
Hon'ble Govt. of Mysore

★

ಮೈಸೂರು ನಗರದ ಪತ್ರಿಕೆಗಳ ಸಂಪಾದಕರು ಮತ್ತು ಪ್ರಕಾಶಕರೂ ಹಿಂದೊಮ್ಮೆ ನಡೆದಿದ್ದ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟ ಠರಾವುಗಳಲ್ಲಿ

.... ಇದೂ ಒಂದು ....

ಮೈಸೂರು ರಾಜ್ಯ ಸರಕಾರವು ಪತ್ರಿಕೆಗಳಿಗೆ ಜಾಹಿರಾತು ಹಂಚುವಿಕೆಯಲ್ಲಿ ಅನುಸರಿಸುತ್ತಿರುವ ಈಗಿನ ವಿಧಾನ ಸಮರ್ಪಕ ರೀತಿಯಲ್ಲಿ ಇಲ್ಲದಿರುವುದರಿಂದ, ಜಾಹಿರಾತು ವಿಷಯದ ಸ್ಥಳೀಯ ಪ್ರಾಮುಖ್ಯತೆ ಅನುಸರಿಸಿ ಎಲ್ಲ ಸಣ್ಣ ಪತ್ರಿಕೆಗಳಿಗೂ ಪ್ರಮಾಣಾನುಸಾರವಾಗಿ ನಿಷ್ಪಕ್ಷಪಾತ ರೀತಿಯಿಂದ ಜಾಹಿರಾತು ವಿತರಣೆ ಮಾಡಬೇಕೆಂದು ಈ ಸಭೆ ರಾಜ್ಯ ಸರಕಾರವನ್ನು ಕೋರುತ್ತದೆ.

ಪುಡ್‌ಲಾಂಡ್ ಅಮೋಘ 4 ನೇ ವಾರ
ಅಮೋಘ ಆರಂಭ

— ಮನಮೋಹಕ ಈಸ್‌ಮನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸಮಾನ್

ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಛೋಪ್ರ, ರಾಜೇಂದ್ರನಾಥ್
ಸಂಗೀತ– ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

ಅಪೆರ— ಜನಪ್ರಿಯ 3 ನೇ ವಾರ

ಚಿತ್ತಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ್ ಕುಮಾರ್ ಅಶ್ವತ್ ದಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀಶಾರದಾಂಬಾ ಜಗದ್ಗುರು ಮಹಾಸನ್ನಿಧಾನಂಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಾನಂಗಳವರ ಆಶೀರ್ವಾದಾಂ ಅನುಗ್ರಹ ಕೃಪೆಯಿಂದಾಗಿದೆ

ಕರ್ನಾಟಕದಾದ್ಯಂತ ಗೋರಕ್ಷಣೆ ಪ್ರಾರಂಭವಾಗಿದೆ. ಕಾಲಾಹಾರಾಂ, ಪಶುವೈದ್ಯ, ಎಜಾರರಿಗೆ ವಿಶೇಷ ಪ್ರಚಾರಾಂ ಪೂರಸಪತ್ರಿಕೆ : ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣಾ ವ್ಯವಸ್ಥಾಪಕರು ವಿನಂತಿ

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿಗೆ ಕಳಿದಿರುವವರು ಇವರ್ಷ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ್ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರನಿರತ, ಹೊಂಗನೂರು
ಗೋರಕ್ಷಣಾ ಅಪೀಸು ಸರ್ವವಾದಿಪ್ರೆಸ್ ಚಾಮರಾಜಪುರಂ ಮೈಸೂರು 4
ವಿಳಾಸ — ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Edited, Printed & Published by Dharmaprachara Nirata M S Krishna Rao (Proprietor) at the Sarvavadi Press Chamarajapuram, Mysore-4